
REVIEW OF RESEARCH

ISSN: 2249-894X
IMPACT FACTOR : 5.2331(UIF)
VOLUME - 7 | ISSUE - 1 | OCTOBER – 2017



# ಪಿ. ಲಂಕೇಶ್‌ರವರ 'ಗುಣಮುಖ' ಒಂದು ಚಿಂತನ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ

ಕನ್ನಡ ಸಾಹಿತ್ಯ ಕಂಡ ಖ್ಯಾತ ಸೃಜನಶೀಲ ಬರಹಗಾರರು ಪಿ. ಲಂಕೇಶರವರು, ಭಾರತೀಯ ಸಂಸ್ಕೃತಿಗೆ ಒಂದು ಹೊಸ ಆಯಾಮವನ್ನು ನೀಡಬಲ್ಲ ಸಿದ್ಧಹಸ್ತ ಬರಹಗಾರರಾಗಿದ್ದರು. ಇವರ ಪ್ರತಿಯೊಂದು, ಕಥೆ, ಕಾವ್ಯ, ಕಾದಂಬರಿಗಳಲ್ಲಿ ಮನುಷ್ಯನ ಬದುಕನ್ನು ಕಟ್ಟಿಕೊಡುವ ರೀತಿ ಒಂದು ಹೊಸ ಆಯಾಮವನ್ನೆ ಸೃಷ್ಟಿಸುತ್ತದೆ. ಇವರ ಕಾದಂಬರಿಗಳಾದ ಬಿರುಕು 1967, ಮುಸ್ಸಂಜೆಯ ಕಥಾಪ್ರಸಂಗ 1978, ಅಕ್ಕ 1991, ಇವು ಕಾದಂಬರಿ ಕ್ಷೇತ್ರದಲ್ಲಿ ಒಂದು ಹೊಸ ಅಲೆಯನ್ನೆ ಸೃಷ್ಟಿಸಿದವು. ಮಹತ್ವದ ಕಥೆಗಳಾದ ಕಲ್ಲು ಕರಗುವ ಸಮಯ 1990, ಕೆರೆಯ ನೀರನ್ನು ಕೆರೆಗೆ ಚೆಲ್ಲಿ 1963, ಇವು ಮಾನವನ ಬದುಕಿನ ಮೂಲ ಸೆಲೆಯನ್ನು ಹುಡುಕುವಲ್ಲಿ ಯಶಸ್ವಿಯಾಗಿವೆ.

ಇವರ ಪ್ರಖ್ಯಾತ ನಾಟಕಗಳಾದ ಟಿ. ಪ್ರಸನ್ನನ ಗೃಹಸ್ಥಾಶ್ರಮ 1962, ನನ್ನ ತಂಗಿಗೊಂದು ಗಂಡುಕೊಡಿ 1963, ಬಿರುಕು 1973, ಸಂಕ್ರಾಂತಿ 1971 ಮತ್ತು ಗುಣಮುಖ 1993, ಈ ನಾಟಕಗಳು ಮಾನವನ ಮೂಲಭೂತ ಜೀವನದ ನೆಲೆಯನ್ನು ಹುಡುಕುತ್ತಾ ನಡೆಯುತ್ತವೆ. ಸಮಾಜವನ್ನು ತಿದ್ದುವಲ್ಲಿ ನವಸಮಾಜ ನಿರ್ಮಾಣ ಮಾಡುವ ಅಂಶಗಳು ಈ ನಾಟಕಗಳು ಬಿತ್ತರಿಸುತ್ತವೆ.

## ಪ್ರಸ್ತಾವನೆ

ಪಿ. ಲಂಕೇಶರ ಗುಣಮುಖ ನಾಟಕ ಒಂದು ಚಿಂತನಾಕ್ರಮದಿಂದ ನೋಡುವುದಾದರೆ ಮೂಲತಃ ಇದೊಂದು ಐತಿಹಾಸಿಕ ನಾಟಕ, ಇತಿಹಾಸದಲ್ಲಿ ಮರುಕಳಿಸಿದ ಸತ್ಯ ಘಟನೆಯನ್ನು ಕುರಿತಾದ ನಾಟಕ ಕ್ರಿ.ಶ. 1740ರಲ್ಲಿ ಪರ್ಶಿಯಾದ ನಾದಿರಷಾ ದೆಹಲಿಯ ಮಹಮದಷಾ (ಈ ನಾಟಕದ ನಜಿರುದ್ದೀನಷಾ)ನ ಮೇಲೆ ದಾಳಿ ಮಾಡಿ ಸಂಪೂರ್ಣವಾಗಿ ದೆಹಲಿಯನ್ನು ವಶಪಡಿಸಿಕೊಳ್ಳುವುದು ಇದರ ಕಥಾವಸ್ತು. ಈ ಸಮಯದಲ್ಲಿ ಯುದ್ಧ ಮತ್ತು ಕೊಲೆಗಳಿಂದ ಬೆಸತ್ತ ನಾದಿರಷಾನಿಗೆ ರೋಗ ಉಲ್ಬಣವಾಗಿ, ಹುಚ್ಚನಂತೆ ವರ್ತಿಸಿ ಹಲವರ ತಲೆಯನ್ನು ತೆಗೆಯುತ್ತಾನೆ.

ಈ ನಾಟಕದ ಕಥಾವಸ್ತುವಿಗೆ ಸಂಬಂಧಪಟ್ಟಂತೆ ಇತಿಹಾಸದ ಲಿಖಿತ ಆಧಾರ ನೋಡುವುದಾದರೆ **"ಯುದ್ಧದಲ್ಲಿ ಸಾದತ್‌ಖಾನ್‌ನು ನಾದಿರ್‌ಷಾನಿಗೆ ಸೆರೆಸಿಕ್ಕನು ಈ ಸಂದರ್ಭದಲ್ಲಿ ಎರಡೂ ಪಕ್ಷಗಳ ನಡುವೆ ಒಪ್ಪಂದದ ಮಾತುಕತೆಗಳು ನಡೆದು ನಾದಿರ್‌ಷಾನು ಎರಡು ಕೋಟಿ ರೂಪಾಯಿಗಳನ್ನು ನೀಡಿದರೆ ತಾನೂ ವಾಪಸ್ಸು ಹೋಗುವುದಾಗಿ ಒಪ್ಪಿಕೊಂಡನು ಆಗ ಚಕ್ರವರ್ತಿಯು ಮೀರ್‌ಭಕ್ಷಿ ಹುದ್ದೆಗೆ ನಿಜಾಮ್‌ಉಲ್‌ಮುಲ್ಕ್‌ನನ್ನು ನೇಮಕ ಮಾಡಿದ್ದರಿಂದ ನಾದಿರ್‌ಷಾನ ಶಿಬಿರದಲ್ಲಿ ಬಂಧಿತನಾಗಿದ್ದ ಸಾದತ್‌ಖಾನನು ಕೋಪಗೊಂಡು ಮೀರ್‌ಭಕ್ಷಿ ಹುದ್ದೆಯು ತನಗೆ ಸಿಗದ್ದರಿಂದ ಹತಾಶನಾಗಿ ನಾದಿರ್‌ಷಾನು ದೆಹಲಿಗೆ ಹೋಗುವುದಾದರೆ 20 ಕೋಟಿಗೂ ಹೆಚ್ಚು ಸಂಪತ್ತು ದೊರೆಯುವುದೆಂದು ಸಲಹೆ ನೀಡಿದನು. ಇದರಿಂದ ಉತ್ತೇಜಿತನಾದ ನಾದಿರ್‌ಷಾನು ಒಪ್ಪಂದದ ಷರತ್ತನ್ನು ತಿರಸ್ಕರಿಸಿ ನಿಜಾಂಉಲ್‌ಮುಲ್ಕ್ ಮತ್ತು ಮೊಹಮ್ಮದಷಾರು ನಾದಿರ್‌ಷಾನು ಭೇಟಿಗೆ ಬಂದಾಗ ಅವರಿಬ್ಬರನ್ನು ಬಂಧಿಸಿದನು. ಬಂಧಿಗಳ ಸಮೇತ ದೆಹಲಿಯತ್ತ ಮುನ್ನಡೆದನು. ನಾದಿರ್‌ಷಾನು ಮಹಮದ್‌ಷಾನೊಡನೆ 1739 ಮಾರ್ಚ್ 20ರಂದು ದೆಹಲಿಯನ್ನು ಪ್ರವೇಶಿಸಿದರು. ಮಾರ್ಚ್ 22ರಂದು ದೆಹಲಿಯಲ್ಲಿನ ಸಾರ್ವಜನಿಕರು ನಾದಿರ್‌ಷಾನನ್ನ ಯಾರೋ ಕೊಲೆಮಾಡಿದ್ದರೆಂದು ಸುದ್ದಿ ಹಬ್ಬಿಸಿದರಲ್ಲದೆ ಕೆಲವು ಪರ್ಷಿಯನ್ ಸೈನಿಕರನ್ನು ಕೊಲ್ಲಲಾಯಿತು. ಇದನ್ನು ನೋಡಿದ ನಾದಿರಷಾ ಕೋಪಾವಿಷ್ಟನಾಗಿ ದೆಹಲಿಯ ನಾಗರಿಕರ ಸಾಮೂಹಿಕ ಹತ್ಯೆಗೆ ಆಜ್ಞೆ ಮಾಡಿದನು. ಈ ಹತ್ಯೆ ಎಂಟುಗಂಟೆಗಳ ಕಾಲ ಮುಂದುವರೆದು ಸುಮಾರು 30,000 ದೆಹಲಿಯ ನಾಗರಿಕರು ಸಾವನ್ನಪ್ಪಿದರು"**[1] ಮನೆಗಳನ್ನು ಲೂಟಿ ಮಾಡಿದರು ಆಸ್ತಿಪಾಸ್ತಿಗಳು ಸುಟ್ಟುಹಾಕಿದರು. ಗಂಡಸರನ್ನು, ಮಕ್ಕಳನ್ನು ಕೊಲ್ಲಲಾಯಿತು. ಸಂಪೂರ್ಣವಾಗಿ ದೆಹಲಿಯನ್ನೆ ಲೂಟಿಮಾಡಿದರು. ಇದೇ ಸಂದರ್ಭದಲ್ಲಿ ನಾದಿರಷಾನ ಆರೋಗ್ಯ ಹದಗೆಟ್ಟಿತು. ಇತನ ಆರೋಗ್ಯ ಸುಧಾರಣೆಗೆ ಹಕೀಮ ಅಲಾವಿಖಾನ್‌ನಿಗೆ ನೇಮಿಸಿದರು. ಈತನಿಂದಲೇ ಗುಣಮುಖನಾದ ನಾದಿರಷಾ ಕೇವಲ ಎರಡು ತಿಂಗಳು ಮಾತ್ರ ದೆಹಲಿಯಲ್ಲಿ

ಉಳಿದುಕೊಂಡಿದ್ದು ಇದು ನಿಜ ಘಟನೆ ಇದನ್ನೇ ಆಧಾರವಾಗಿಟ್ಟುಕೊಂಡು ಇಂದಿನ ಆಧುನಿಕ ಸಮಾಜಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ನಾಟಕವನ್ನು ಲಂಕೇಶರು ರಚಿಸಿದ್ದಾರೆ.

**ಚಿಂತನೆ**

ಗುಣಮುಖ ನಾಟಕ ಗಾತ್ರದಲ್ಲಿ ಚಿಕ್ಕದಾಗಿದೆ. ಮೂರ್ತಿಚಿಕ್ಕದಾದರು ಕೀರ್ತಿ ದೊಡ್ಡದು ಎಂಬಂತೆ ದೆಹಲಿಯಲ್ಲಿನ ಮೊಘಲ್ ಕೊನೆಯ ಅರಸರ ದುರಾಡಳಿತವನ್ನು ಚಿತ್ರಿಸುತ್ತಾರೆ. ನಾದಿರಷಾನ ದಾಳಿಯಿಂದ ದೆಹಲಿ ತತ್ತರಿಸಿ, ನಲುಗಿ ಹೋಗಿದ್ದ ರೀತಿಯನ್ನು ಮತ್ತು ಒಳಸಂಚು, ಪಿತೂರಿಗಳಿಂದ ತಮ್ಮ ಜೀವಕ್ಕೆ ತಾವೇ ಕುತ್ತು ತಂದುಕೊಂಡ ಸಾದತ್‌ಖಾನ್ ಹಾಗೂ ಮುಲ್ಕ್‌ರ ಕುರಿತು ಹೇಳುತ್ತಾರೆ. ಸುಮಾರು ಮೂರು ದೃಶ್ಯಗಳನ್ನು ಹೊಂದಿದ್ದ ನಾಟಕ. ಕೇವಲ 49 ಪುಟಗಳ ಹಾಗೂ ಹತ್ತಕ್ಕಿಂತ ಹೆಚ್ಚು ಪಾತ್ರಗಳನ್ನು ಒಳಗೊಂಡಿದೆ.

ನಾದಿರಷಾ ದಂಡ ನಾಯಕನಾಗಿದ್ದ ರಜ್ವಿ, ಈತ ನಜೀರ್ ಮತ್ತು ಸಬೀನಾರ ಪ್ರೇಮ ಪ್ರಕರಣ ವಿಚಾರಣೆ ಮಾಡುವ ಸಂದರ್ಭದಲ್ಲಿ ನಾದಿರಷಾ ಇವರನ್ನು ಎಲ್ಲಿಂದ ತಂದೆ ಇವರನ್ನು ಹೊರಅಟ್ಟಿ ಎಂದು ಕೂಗಿಕೊಳ್ಳುತ್ತಾನೆ. ರೋಗಗ್ರಸ್ತನಾದ ನಾದಿರ್‌ಷಾನಿಗೆ ಇದೆಲ್ಲಾ ವಿಚಿತ್ರವೆಂಬಂತೆ ಕಾಣುತ್ತದೆ. ಸುಲೇಮಾನ್ ತನ್ವಿರ ಸಾಧಾರಣ ಹುಡುಗನಾಗಿದ್ದವನು. ಪರಿಸ್ಥಿತಿಯು ಒತ್ತಡದಿಂದ ಆತನ ರೌಡಿಯಾಗಿದ್ದಾನೆ. ಆತನನ್ನು ನಾದಿರ್‌ಷಾನ ಎದುರು ಕರೆಯಿಸಿದರೆ, ನಾದಿರ್‌ಷಾ ಗೌರವವನ್ನು ಕೊಟ್ಟು **"ತನ್ವೀರ್: ದೊರೆ ತಪ್ಪು ತಿಳಿಯಬೇಡಿ, ನಮ್ಮೊಂದಿಗೆ ಸರ್ವಶಕ್ತ ಅಲ್ಲಾಹು ಇದ್ದಾನೆ. ಇಲ್ಲಿಗೆ ಬಂದಾಗಿನಿಂದ ಗೆಲ್ಲುವುದಕ್ಕಾಗಿ, ಗೆದ್ದದ್ದು ಉಳಿಸಿಕೊಳ್ಳುವುದಕ್ಕಾಗಿ ಪ್ರಯತ್ನಿಸುತ್ತಲೆ ಇದ್ದಿರಿ, ಇಲ್ಲಿ ಎಲ್ಲ ದಿಗ್ಭ್ರಮೆ, ಕಗ್ಗತ್ತಲು ಕತ್ತಿಯ ಅಲಗು ತುಕ್ಕು ಹಿಡಿಯಲು ಬಿಡಕೂಡದು ನಯ ವಂಚಕರ ತಲೆ ಕತ್ತರಿಸುತ್ತಾ ಹೋದರೆ ಮಾತ್ರ ಎಲ್ಲ ಸ್ಪಷ್ಟವಾಗುತ್ತದೆ. ಹಿಂದೂಸ್ತಾನದ ಗಾಳಿ ಹಾಗಿದೆ ಇಲ್ಲಿ ಎಲ್ಲ ಕಣ್ಣುಕಟ್ಟು. ಯಕ್ಷಿಣಿ ಅದರಿಂದ ನಾವು ಅಂಧರಾಗಕೂಡದು"**[2] ಉದ್ಧಟತನದಿಂದ ಮಾತನಾಡುತ್ತಾನೆ.

ನಾದಿರಷಾನ ಮಾತುಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿಯ ಪ್ರಜೆಗಳ ವ್ಯಕ್ತಿತ್ವದ ಬಣ್ಣ ಬಯಲು ಮಾಡಿರುವವರು ಲೇಖಕರು **"ನಾದಿರ್‌ಷಾ: ತನ್ವೀರ್‌ನ ವಿಚಾರ ಕೇಳಿದಂತೆಲ್ಲ ನಮಗೆ ಇಲ್ಲಿಯ ಬದುಕಿನ ನಿಗೂಢ ಅಚ್ಚರಿ ಹುಟ್ಟಿಸುತ್ತದೆ. ಮೊನ್ನೆ ನಮಗೆ ಬೆಕ್ಕು ನೋಡಬೇಕಂತ ಆಶೆಯಾಯಿತು. ನಾವು ಬೆಕ್ಕು ಕಳಿಸಲು ಹೇಳಿಕಳುಹಿಸಿದೆವು. ರಾಜ ಕಳಿಸಿದ್ದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಬೆಕ್ಕಿಗೆ ಬದಲು ಹುಡುಗಿ ಕಳಿಸಿದ್ದ. ನಾವು ಅದರಿಂದ ಅವಮಾನಿತರಾಗಲಿಲ್ಲ ಯಾಕೆಂದರೆ ನಾದಿರ್‌ಷಾನಂಥ ಮಹಾನ್ ಚಕ್ರವರ್ತಿ ಕೇವಲ ಬೆಕ್ಕಿಗಾಗಿ ಹೇಳಿಕಳಿಸಲಾರರು ಎಂಬುದು ಅವನ ಕಲ್ಪನೆ. ಈ ದೇಶದಲ್ಲಿ ಬೆಕ್ಕು ಬೇಕೆಂದರೆ ಹುಡುಗಿ ಕಳಿಸುತ್ತಾರೆ. ತೈಲ ಬೇಕೆಂದರೆ ಬೆಲೆಬಾಳುವ ಮದ್ಯ ಕಳಿಸುತ್ತಾರೆ (ಗಟ್ಟಿಯಾಗಿ) ಅಷ್ಟೇ ಅಲ್ಲ ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡುತ್ತಾರೆ. ನೂರಾರು ಮಾತುಗಳಿಂದ ತಮ್ಮ ದೊರೆಯ ವಿರುದ್ಧವೇ ಮಸಲತ್ತು ನಡೆಸುತ್ತಾರೆ– ಇವರನ್ನು ಹೇಗೆ ಅರ್ಥಮಾಡಿಕೊಳ್ಳುವುದೋ ತಿಳಿಯುತ್ತಿಲ್ಲ"**[3] ಇಲ್ಲಿನ ವಾಸ್ತವದ ಸ್ಥಿತಿಯನ್ನು ಕುರಿತು ಮಾತನಾಡುತ್ತಾರೆ. ನಾದಿರ್‌ಷಾನು ಸಾದತ್‌ಖಾನನನ್ನು ಹೊಡೆದು (ಗುದ್ದಿ) ಕೊಲೆಮಾಡುತ್ತಾನೆ. ಇದನ್ನು ತಿಳಿದು ನಜಿರುದ್ದೀನ್‌ಷಾ ಭೇಟಿಯಾಗಲು ಹೊರಡುತ್ತಾನೆ. ನಜಿರುದ್ದೀನ್‌ಷಾರು ನಾದಿರ್‌ಷಾನಿಗೆ ಏನು ನಡೆದಿಲ್ಲವೆಂಬಂತೆ ಮಾತಿನಲ್ಲಿ ತೊಡಗುತ್ತಾರೆ. ನಾದಿರ್‌ಷಾ ದೆಹಲಿಯ ಸುಲ್ತಾನ ನಜಿರುದ್ದೀನ್ ವರ್ತನೆಯನ್ನು ರಜ್ವಿಯ ಎದುರು ಹೇಳುತ್ತಾನೆ.

**"ನಾದಿರ್: ರಸಿಕ! ನಮ್ಮ ಸೈನ್ಯ ದಿಲ್ಲಿಗೆ ಗಾವುದ ದೂರದಲ್ಲಿ ಫಿರಂಗಿಗಳೊಂದಿಗೆ ನುಗ್ಗಲು ಸಿದ್ಧವಾಗಿದ್ದಾಗ ಈತ ದಿಲ್ಲಿಯ ಅರಮನೆಯಲ್ಲಿ ಮೋಜಿನ ಕೂಟದಲ್ಲಿದ್ದ ಹತ್ತು ಲಕ್ಷ ಸೈನಿಕರ, ಐನೂರು ಆನೆಗಳ ತನ್ನ ಸೈನ್ಯದೆದುರು ನಮ್ಮದು ಧ್ವಂಸವಾಗುತ್ತೆ ಎಂದು ತಿಳಿದು ಸಂಗೀತ ಆಲಿಸುತ್ತಿದ್ದ ಎಂಥ ಮೋಜು, ಒಂದು ಕೈಯಲ್ಲಿ ಹೆಂಡ ಇನ್ನೊಂದು ಕೈಯಲ್ಲಿ ಹುಡುಗಿಯ ಸೊಂಟ. ಸಂಗೀತ ನೃತ್ಯ, ಸಂಭೋಗ.... ಸೈನ್ಯ ಧ್ವಂಸವಾಗಿ ನಮ್ಮೆದುರು ಈತ ತಲೆತಗ್ಗಿಸಿ ನಿಂತದ್ದು ನೋಡಬೇಕಿತ್ತು! ದೂತ ಎಷ್ಟು ಜನ ಬಂದಿದ್ದಾರೆ?"**[4] ನಜಿರುದ್ದೀನ್ ಮಹಮ್ಮದ್‌ಷಾ ನಾದಿರ್‌ಷಾನಿಗೆ ಸಲಾಮು ಮಾಡಿ ತಾವು ತಂದಿದ್ದ ನಾಲ್ಕು ಕೋಟಿ ಹಣದ ಪೆಟ್ಟಿಗೆಯನ್ನು ಕೊಡುತ್ತಾರೆ. ಹಣದಕ್ಕಿಂತ ಅವಶ್ಯಕತೆ ಎಂದರೆ ಆತನಿಗೆ ಒಬ್ಬ ಹಕೀಮ ಬೇಕಾಗಿರುತ್ತಾನೆ. ನಜಿರುದ್ದೀನ್ ಎದುರು ರಜ್ವಿಯ ಮಾತಿನಲ್ಲಿ ಭಾರತ ದೇಶದ ಇಂದಿನ ಸರ್ಕಾರದ ಆಡಳಿತ ನಮ್ಮೆದುರು ನಿಲ್ಲಿಸುತ್ತದೆ.

**"ನಮ್ಮ ಹೇಳಿಕೆಯನ್ನು ದೊರೆ ನಾದಿರ್‌ಷಾ ಅವರು ಅಸ್ವಸ್ಥರಾಗಿದ್ದಾರೆ ಒಬ್ಬ ಹಕೀಮ ಬೇಕು ಅನ್ನೋ ಹೇಳಿಕೆಯನ್ನು ಒಬ್ಬ ಬರೆದುಕೊಂಡ ಅವನು ಬರೆದುಕೊಳ್ಳುತ್ತಿದ್ದ ಅವಸರ ನೋಡಿ ಇನ್ನೇನು ಹಕೀಮ ಬಂದೇ ಬಿಡುತ್ತಾನೆ ಅಂತ ತಿಳಿದೇವು. ಒಂದು ದಿನವಾಯಿತು, ಎರಡು ದಿನವಾಯಿತು, ಇದು ಮೂರನೇ ದಿನ ಈ ಬಗ್ಗೆ ವಿಚಾರಿಸಿದೆವು, ನಮ್ಮ ಕೋರಿಕೆಯನ್ನು ಬರೆದುಕೊಂಡ ಮನುಷ್ಯ ಮೇಲಿನ ಗುಮಾಸ್ತನಿಗೆ ಬರೆದು ತಿಳಿಸಬೇಕಂತೆ, ಆತ ಅವನ ಮೇಲಿನವನಿಗೆ ಬರೆಯಬೇಕಂತೆ ದಿಲ್ಲಿಯ ಆಡಳಿತಾಧಿಕಾರಿಗೆ ಅದು ತಲುಪಿ ಆ ಮೇಲೆ ಕೆಳಗಿನ ಅಧಿಕಾರಿಗೆ ಹೋಗಿ ವೈದ್ಯಕೀಯ ಇಲಾಖೆ ತಲುಪಬೇಕಂತೆ, ಆ ಮೇಲೆ ದೊರೆಗೆ, ಒಟ್ಟಿನಲ್ಲಿ ಏನೂ ಆಗಲಿಲ್ಲ"**[5] ಇಂದಿನ ಆಡಳಿತವನ್ನು ಪ್ರತಿಧ್ವನಿಸುವ ಮಾತಾಗಿದೆ. ದೆಹಲಿಯನ್ನೆ ಕಗ್ಗೊಲೆ ಮಾಡಿದ ನಾದಿರ್‌ಷಾನ ಬಗ್ಗೆ ನಜಿರುದ್ದೀನ್ ಮಹಮುದ್‌ಷಾ ಒಂದು ಕವನ ರಚಿಸುವುದು ವಿಪರ್ಯಾಸವೇ ಆಗಿದೆ, ಅದು ನಾದಿರ್‌ಷಾನ ಎದುರಿನಲ್ಲೆ ಓದುತ್ತಾನೆ

**"ಹಿಮಾಲಯ ಪರ್ವತದ ತಪ್ಪಲಲ್ಲಿ**
**ಸಿಂಹವೊಂದು ಮೊಗದೋರಿತು**
**ಗುಬ್ಬಚ್ಚಿಗಳು ದಿಕ್ಕು ತೋಚದೆ**
**ಗೂಡಿನಲ್ಲಿ ಮುದುಡಿ ಕೂತವು**
**ಇನ್ನೂ ಹೇಳಲೆ?"**[6]

ಸಿಂಹ ನಾದಿರ್‌ಷಾ, ಗುಬ್ಬಚ್ಚಿಗಳು ಇಲ್ಲಿನ ಭಾರತ ದೇಶದ ರಾಜರು, ಆ ಸಿಂಹದ ಎದುರು ಏನು ಮಾಡದೆ ಸುಮ್ಮನೆ ಕುಳಿತುಕೊಂಡರು ಎನ್ನುವುದು ನಜಿರುದ್ದೀನ್ ಮಹಮದಷಾನ ತಾತ್ಪರ್ಯ.

ನಾದಿರ್‌ಷಾ ಈಗಾಗಲೇ ಸಾದತ್‌ಖಾನನನ್ನು ಕೊಲೆ ಮಾಡಿದ್ದಾನೆ. ನಂತರ ಮುಲ್ಕ್‌ನನ್ನು ಹೇಳಿಕಳುಹಿಸುತ್ತಾನೆ. ಮುಲ್ಕ್ ಎಷ್ಟೇ ಪಿತೂರಿ ಮಾಡಿದರು ಅದು ಸಾಧ್ಯವಾಗಲಾರದು. ಮುಲ್ಕ್‌ನು ಹತನಾಗುತ್ತಾನೆ. ಅಷ್ಟರಲ್ಲೆ ನಾದಿರ್‌ಷಾ ರೋಗಕ್ಕೆ ತುತ್ತಾಗುತ್ತಾನೆ. ಆತನನ್ನು ಗುಣಪಡಿಸಲು ಎಷ್ಟೆ ಹಕೀಮರು ಬಂದರು, ರೋಗದಿಂದ ಮುಕ್ತನಾಗಲಾರ.

ಇದೇ ಸಂದರ್ಭದಲ್ಲಿ ವೃದ್ಧ ಹಕೀಮ ಅಲಾವಿಖಾನ್ ಬರುತ್ತಾನೆ. ನೇರವಾಗಿ ಬಂದವನೇ ರಾಜನ ಹೆಸರು ಕೇಳುತ್ತಾನೆ. ಈ ಪ್ರಶ್ನೆಯಿಂದ ನಾದಿರ್‌ಷಾ ಕೆಂಡಾಮಂಡಲನಾಗುತ್ತಾನೆ **"ತಲೆಹರಟೆಯ ಗೂಬೆ ಮುದುಕ ಕತ್ತೆಗೆ ವಯಸ್ಸಾದಂತೆ ವಯಸ್ಸಾಗಿದೆ. ನಿನಗೆ ವಿವೇಕ ಬಂದಂತಿಲ್ಲ ಬೊಗಳು ನೀನೆಂಥ ವೈದ್ಯ? ಎಲ್ಲಾ ಬಿಟ್ಟು ಈ ವೃತ್ತಿಯನ್ನೆ ಯಾಕೆ ಹಿಡಿದೆ?"**[7] ಮರುಪ್ರಶ್ನೆ ಮಾಡುತ್ತಾನೆ. ಕೊನೆಗೆ ರೊಚ್ಚಿಗೆದ್ದು ಮುದುಕನನ್ನು ಓಡಿಸುತ್ತಾನೆ. ಕೊನೆಗೆ ಶಂಶುದ್ದೀನ್‌ಖಾನ್ ಸರ್ಕಾರಿ ವೈದ್ಯ ಬಂದರು ಆತನಿಂದಲೂ ಸಾಧ್ಯವಾಗುವುದಿಲ್ಲ ರೋಗವಾಸಿಯನ್ನು ಮಾಡುವುದು ಬಿಟ್ಟು ಈತನನ್ನು ಹಗಲಿನ ಏಕಮಾತ್ರ ನಕ್ಷತ್ರ ಎಂದು ಹೊಗಳುತ್ತಾರೆ. ಇದರಿಂದ ರೊಚ್ಚಿಗೆದ್ದ ನಾದಿರ್‌ಷಾ **"ನಿನ್ನಿಂದ ಕಾಯಿಲೆ ಗುಣವಾಗ್ತಿಲ್ಲ ನಿನ್ನ ಮಾತಿನಿಂದ ತಲೆನೋವು ಹೆಚ್ಚಾಗ್ತಿದೆ. ನಿನ್ನ ಗಂಟುಮೂಟೆ ಕಟ್ಟಿಕೊ. ಆ ಅಲಾವಿ ಅನ್ನೋ ರಣಹದ್ದಿಗೆ ಬದಲು ಅರಚುವ ಕತ್ತೆ ನೀನು ಬಂದೆ, ನನಗೆ ಈ ತಲೆನೋವು ದಿಗ್ಭ್ರಮೆಯಿಂದ ಬಿಡುಗಡೆಯೇ ಇಲ್ಲ ಅನ್ಸುತ್ತೆ ತೊಲಗು ಇಲ್ಲಿಂದ"**[8] ಓಡಿಸಿ ಬಿಡುತ್ತಾನೆ.

ನಾದಿರ್‌ಷಾ ಕೊನೆಗೆ ಹಕೀಮ ಅಲಾವಿಖಾನ್‌ನಿಂದ ಚಿಕಿತ್ಸೆ ಪಡೆದು ಗುಣಮುಖನಾಗುತ್ತಾನೆ.

**ಅಡಿಟಿಪ್ಪಣಿಗಳು :**

1. ಸದಾಶಿವ ಕೆ. : ಸಮಗ್ರ ಭಾರತದ ಇತಿಹಾಸ.ಪು– 379.
2. ಲಂಕೇಶ ಪಿ. : ಗುಣಮುಖ . ಪು– 5.
3. ಲಂಕೇಶ ಪಿ. : ಗುಣಮುಖ . ಪು– 4.
4. ಲಂಕೇಶ ಪಿ. : ಗುಣಮುಖ . ಪು– 10–11.
5. ಲಂಕೇಶ ಪಿ. : ಗುಣಮುಖ . ಪು– 12.
6. ಲಂಕೇಶ ಪಿ. : ಗುಣಮುಖ . ಪು– 12.
7. ಲಂಕೇಶ ಪಿ. : ಗುಣಮುಖ . ಪು– 33.
8. ಲಂಕೇಶ ಪಿ. : ಗುಣಮುಖ . ಪು– 28.